ಅ) ಯಾವ ಯಾವ ಖಾಸಗಿ ಕಂಪನಿಗಳಿಂದ ಇದರ ನಿರ್ಮಾಣಕ್ಕಾಗಿ ಅರ್ಜಿಗಳು ಬಂದಿವೆ.

ಇ) ಇವುಗಳಲ್ಲಿ ಯಾವ ಅರ್ಜಿಗಳನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

ಈ) ಯಾವ ಆಧಾರದ ಮೇಲೆ ಈ ಶಿಫಾರಸ್ಸು ಮಾಡಲಾಗಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಈ ಪ್ರಸ್ತಾವನೆ ಜಂಟೀ ವಲಯದಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪಿಸುವುದಾಗಿದೆ.

ಆ) 1. ಎಸ್ಸಾರ್ ಗುಜರಾತ್ ಲಿಮಿಟೆಡ್

2. ಮುಕುಂದ (ಐ) ಲಿಮಿಟೆಡ್

3. ಬರೋಕಾ ಸ್ಟೀಲ್ಸ್ ಲಿಮಿಟೆಡ್

4. ಖೋಡೆ ಡಿಸ್ಟಿಲರೀಸ್ ಲಿಮಿಟೆಡ್

5. ವಿಡಿಯೋಕಾನ್ ಇಂಟರ್‌ನ್ಯಾಷನಲ್ ಲಿಮಿಟೆಡ್

6. ಉಷಾ ರೆಫ್ಟಿಫೈರ್ಸ್ ಕಾರ್ಪೊರೇಷನ್ (ಇಂಡಿಯಾ) ಲಿಮಿಟೆಡ್.

ಇ) ಮೆ. ಎಸ್ಸಾರ್ ಗುಜರಾತ್ ಲಿಮಿಟೆಡ್

ಈ) ಅರ್ಜಿಗಳನ್ನು ಪರಿಶೀಲಿಸುವಾಗ ಸರ್ಕಾರ ರಚಿಸಿರುವ ಸಮಿತಿಯು ಈ ಕೆಳಕಂಡ ಅಂಶಗಳನ್ನು ಪರಿಗಣಿಸಿತು.

1. ಉಕ್ಕು ಕಾರ್ಖಾನೆಯನ್ನು ಸ್ಥಾಪಿಸಲು ಹಾಗೂ ನಡೆಸುವ ವಿಧಾನದಲ್ಲಿ ಉದ್ದಿಮೆದಾರರಿಗೆ ಇರುವ ಅನುಭವ ಹಾಗೂ ಹಿಂದಿನ ಹಿನ್ನೆಲೆ.
2. ಈ ಯೋಜನೆಯನ್ನು ತ್ವರಿತ ರೀತಿಯಲ್ಲಿ ಕಾರ್ಯರೂಪಕ್ಕೆ ತರಲು ಇರುವ ಯೋಗ್ಯತೆ.
3. ಯೋಜನೆಯ ವೆಚ್ಚ ಕಡಿಮೆ ಮಾಡಿರುವ ಪ್ರಸ್ತಾವನೆ
4. ಇಂತಹ ದೊಡ್ಡ ಯೋಜನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಅವರಿಗಿರುವ ಅನುಭವ
5. ಈ ಯೋಜನೆಗೆ ಬೇಕಾದಂತಹ ಪ್ರವರ್ತಕನ ಬಂಡವಾಳ ಶೇ. 25 ಮೊತ್ತ ರೂ. 125ರಿಂದ 250 ಕೋಟಿಯನ್ನು ಮೊದಲನೆ ಹಂತದಲ್ಲಿ ಎತ್ತುವ ಮತ್ತು ಒಟ್ಟು ರೂ. 1500ರಿಂದ 3000 ಕೋಟಿಗಳನ್ನು ಒಗ್ಗೂಡಿಸುವುದು.
6. ಯೋಜನೆಯಲ್ಲಿ ಕೆಎಸ್‌ಐಐಡಿಸಿ : ಸರ್ಕಾರ ಹೂಡಬೇಕಾದಂತಹ ಕನಿಷ್ಠ ಬಂಡವಾಳ.

ಕರ್ನಾಟಕ ಒಳನಾಡು ಮಿನುಗಾರಿಕೆ ಅಭಿವೃದ್ಧಿ ನಿಗಮವನ್ನು ಮುಚ್ಚುವ ಕಾರಣವನ್ನು ಕೇಳುವ ಬಗ್ಗೆ.

663 - ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡದೇವನ ಕೋಟೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಒಳನಾಡು ಮಿನುಗಾರಿಕೆ ಅಭಿವೃದ್ಧಿ ನಿಗಮವನ್ನು ಮುಚ್ಚುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮದಲ್ಲಿ ಎಷ್ಟು ಜನ ನೌಕರರಿದ್ದಾರೆ ಮತ್ತು ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ?

ಇ) ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮದಿಂದ ಎಷ್ಟು ಜನ ಮೀನುಗಾರರಿಗೆ ಅನುಕೂಲವಾಗುತ್ತಿದೆ?

ಈ) ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮವು ಸ್ಥಾಪನೆ ಮಾಡಿದಾಗಿನಿಂದ ಇದುವರೆವಿಗೆ ಮಾಡಿರುವ ವೆಚ್ಚವೆಷ್ಟು ?

ಉ) ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮದಿಂದ ಮೀನುಗಾರರಿಗೆ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ ?

ಊ) ನಿಗಮದಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಪರ್ಯಾಯ ವ್ಯವಸ್ಥೆ ಮಾಡಲಾಗಿದೆಯೇ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಹೌದು

ಆ) 224

(ಇವರಲ್ಲಿ 128 ನೌಕರರು ಮೀನುಗಾರಿಕೆ ಇಲಾಖೆಯಿಂದ ನಿಯೋಜನೆಯ ಮೇಲೆ ಕೆಲಸ ನಿರ್ವಹಿಸುತ್ತಿರುತ್ತಾರೆ)

1.2.86 ರಿಂದ 121

1.2.87 ರಿಂದ 29

1.2.88 ರಿಂದ 42

1.2.89 ರಿಂದ 11

1.2.90 ರಿಂದ 21

ಒಟ್ಟು 224

ಇ) ಸುಮಾರು 1400

ಈ) ನಿಗಮವನ್ನು ಸ್ಥಾಪನೆ ಮಾಡಿದಾಗಿನಿಂದ ಜನವರಿ 1991 ರ ಕೊನೆಯವರೆಗೆ 338.81 ಲಕ್ಷ ರೂ.ಗಳು ಖರ್ಚಾಗಿವೆ.

ಉ) ಉತ್ತಮ ತಳಿಯ ಮೀನುಮರಿ ಉತ್ಪಾದನೆಯನ್ನು ಹೆಚ್ಚು ಹೆಚ್ಚು ಮಾಡುವುದು, ಅವುಗಳನ್ನು ಮೀನುಮರಿ ಉತ್ಪಾದನಾ ಸಾಕಾಣಿಕೆ ಕೇಂದ್ರಗಳಲ್ಲಿ ಬೆಳಸಿ ಯೋಗ್ಯ ದರದಲ್ಲಿ ವಿತರಣೆ ಮಾಡುವುದು.

ಊ) ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮದ ನೌಕರರು ಉಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದು, ಈ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಂಡಿರುವುದಿಲ್ಲ. ಆದುದರಿಂದ ಪ್ರಸ್ತುತ ಪರ್ಯಾಯ ನೌಕರಿಯನ್ನು ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಸರ್ಕಾರಿ ನೌಕರರ ನಿವೃತ್ತಿ ವಯಸ್ಸು ಇಳಿಸುವ ಬಗ್ಗೆ.

599 - ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 58ರಿಂದ 55ಕ್ಕೆ ಇಳಿಸಲು ಸರ್ಕಾರದವರ ಮುಂದೆ ಸಲಹೆ ಏನಾದರೂ ಇದೆಯೇ ?

ಆ) ನಿವೃತ್ತಿ ವಯಸ್ಸನ್ನು ಕಡಿಮೆ ಮಾಡುವುದರಿಂದ ಸಾವಿರಾರು ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸಿದಂತೆ ಆಗುವುದಿಲ್ಲವೆ ?

ಇ) ಹಾಗಿದ್ದಲ್ಲಿ, ನಿವೃತ್ತಿ ವಯಸ್ಸನ್ನು ಯಾವಾಗ ಕಡಿಮೆ ಮಾಡಲಾಗುವುದು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಯವರು):